# ಜೂಕರ್‌ಬರ್ಗ್: ಮುಂದೇನು?

ಮಾರ್ಕ್ ಜೂಕರ್‌ಬರ್ಗ್ ಯಾರಿಗೆ ಗೊತ್ತಿಲ್ಲ? 'ಮೊಬೈಲ್ ಇಲ್ಲದ ಜನರಿಲ್ಲ; ಫೇಸ್‌ಬುಕ್ ಇಲ್ಲದ ಮೊಬೈಲ್ ಬಳಕೆದಾರರಿಲ್ಲ' ಎನ್ನುವ ದಿನಮಾನಗಳಿವು. ಹೀಗಾಗಿ ಫೇಸ್‌ಬುಕ್ ಸ್ಥಾಪಕ ಮಾರ್ಕ್ ಜೂಕರ್‌ಬರ್ಗ್ ಯುವಜಗತ್ತಿನ ಅತ್ಯಂತ ಜನಪ್ರಿಯ ಕೋಟ್ಯಾಧೀಶ. 630 ಶತಕೋಟಿ ಡಾಲರ್ ಮೌಲ್ಯದ ಕಂಪೆನಿಯ ಚೇರ್‌ಮನ್ ಮತ್ತು ಸಿಇಓ ಆಗಿರುವ ಜೂಕರ್‌ಬರ್ಗ್, ತನ್ನ ಪ್ರತಿಭೆಯ ಬಲದಿಂದ ಖ್ಯಾತಿ, ಹಣ, ಅಧಿಕಾರ ಎಲ್ಲವನ್ನೂ ಅನುಭವಿಸಿಕೊಂಡು ಹಾಯಾಗಿದ್ದ. ಆದರೆ ಇದೀಗ ಆತನೂ ಚಿಂತಾಕ್ರಾಂತನಾಗಿದ್ದಾನೆ. ಏಕೆಂದರೆ ಫೇಸ್‌ಬುಕ್ ಕಂಪೆನಿಯ ಷೇರುದಾರರು ಆತನ ಬಗ್ಗೆ ಸಿಟ್ಟಾಗಿದ್ದಾರೆ. ಈ ಸಿಟ್ಟು ಆತನ ಚೇರ್‌ಮನ್ ಹುದ್ದೆಯನ್ನು ಕಸಿದುಕೊಳ್ಳುತ್ತದೆಯೆ. ಎನ್ನುವುದೀಗ ಐಟಿ ಮತ್ತು ಷೇರು ವಲಯದ ಬಹುದೊಡ್ಡ ಚರ್ಚೆ.

ತಾಪತ್ರಯ ಶುರುವಾಗಿದ್ದು ಕಳೆದ ವರ್ಷದ ಅಮೆರಿಕ ಅಧ್ಯಕ್ಷರ ಚುನಾವಣೆಯ ಸಂದರ್ಭದಲ್ಲಿ. ಕೇಂಬ್ರಿಡ್ಜ್ ಅನಾಲಿಟಿಕಾ ಎಂಬ ಬಲಪಂಥೀಯ ಒಲವಿನ ಸಂಸ್ಥೆಯೊಂದು, ಫೇಸ್‌ಬುಕ್ ದತ್ತಾಂಶಗಳನ್ನು ಅದರ ಬಳಕೆದಾರರ ಅನುಮತಿಯಿಲ್ಲದೆ ಬಳಸಿ ಅಮೆರಿಕದಲ್ಲಿ ಚುನಾವಣೆ ಗೆಲ್ಲಲು ನೆರವಾಯಿತು ಎನ್ನುವುದು ಕಂಪೆನಿ ವಲಯದಲ್ಲಿ ಕೋಲಾಹಲ ಸೃಷ್ಟಿಸಿದ ಸುದ್ದಿ. ಫೇಸ್‌ಬುಕ್ ಬಳಕೆದಾರ ತನ್ನ ವೈಯಕ್ತಿಕ ಮಾಹಿತಿಗಳನ್ನು ಯಾವುದೋ ಅನಾಮಧೇಯ ಕಂಪೆನಿಯೊಂದಕ್ಕೆ ದುಡ್ಡಿಗೆ ಮಾರುವುದನ್ನು ಖಂಡಿತ ಸಹಿಸುವುದಿಲ್ಲ. ಇದು ವೈಯಕ್ತಿಕ ನಂಬಿಕೆಯ ಪ್ರಶ್ನೆ ಮಾತ್ರವಲ್ಲ, ಉದ್ಯಮದ ನೈತಿಕತೆಯ ಪ್ರಶ್ನೆಯೂ ಹೌದು. ಹೀಗಾಗಿ ದೊಡ್ಡ ಗದ್ದಲವೇ ಉಂಟಾಯಿತು.

ಮೂರು ತಿಂಗಳ ಹಿಂದೆ ಕಂಪೆನಿಯ ಸಭೆಯಲ್ಲಿ ಜೂಕರ್‌ಬರ್ಗ್ ಈ ಬಿಕ್ಕಟ್ಟನ್ನು ಚಾಣಾಕ್ಷತನದಿಂದ ನಿರ್ವಹಿಸಿದ. ಆದ ತಪ್ಪಿಗೆ ಕ್ಷಮೆ ಕೇಳಿದ. ಆಡಳಿತ ಮಂಡಳಿಯ ಸದಸ್ಯರನ್ನು ಒಲಿಸಿಕೊಳ್ಳುವಲ್ಲಿ ಸಫಲನಾದ. ಎಲ್ಲವೂ ಸುಖಾಂತ್ಯ ಕಂಡಿತು ಎಂದುಕೊಂಡ.

ಆದರೆ ಜುಲೈ 26ರಂದು ಫೇಸ್‌ಬುಕ್ ಕಂಪೆನಿಯ ಷೇರುಗಳು ಪಾತಾಳಕ್ಕೆ ಇಳಿದವು. ಇದು ಕಂಪೆನಿಯ ಇತಿಹಾಸದಲ್ಲೇ ಅತಿದೊಡ್ಡ ಏಕದಿನದ ಪತನ! ಕಂಪೆನಿಯ ಒಟ್ಟು ಮೌಲ್ಯದ ಐದನೇ ಒಂದು ಭಾಗ ಅಂದರೆ, ಸುಮಾರು 120 ಶತಕೋಟಿ ಡಾಲರ್ ನಷ್ಟ ಸಂಭವಿಸಿತು. ಮುಂದಿನ ದಿನಗಳಲ್ಲಿ ಕಂಪೆನಿಯ ಲಾಭ ಸಾಕಷ್ಟು ಇಳಿಯಲಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಭಾಷ್ಯ ಬರೆದರು.

ಹೀಗೆ ಷೇರುಬೆಲೆ ಕುಸಿಯಲು ಮುಖ್ಯ ಕಾರಣ ಯೂರೋಪಿನಲ್ಲಿ ಮೇ ತಿಂಗಳಲ್ಲಿ ಜಾರಿಗೆ ಬಂದ 'ಯೂರೋಪಿಯನ್ ಖಾಸಗಿತನ ಕಾಯ್ದೆ' ಕಾರಣ ಎನ್ನಲಾಗುತ್ತಿದೆ. ಈ ನಿಯಮದಿಂದಾಗಿ ಯೂರೋಪ್‌ನ ಫೇಸ್‌ಬುಕ್ ಬಳಕೆದಾರರ ಸಂಖ್ಯೆ 377 ದಶಲಕ್ಷದಿಂದ 376 ದಶಲಕ್ಷಕ್ಕೆ ಇಳಿಯಿತು. ಕಂಪೆನಿಯ ಭವಿಷ್ಯದ ಲಾಭದ ಬಗ್ಗೆ ಅನುಮಾನಗಳು ಶುರುವಾದವು.

ಇಲ್ಲಿಯವರೆಗೆ ಏಕಚಕ್ರಾಧಿಪತ್ಯ ಸ್ಥಾಪಿಸಿದ್ದ ಕಂಪೆನಿ ಹೀಗೆ ಮಾರುಕಟ್ಟೆಯಲ್ಲಿ ಕುಸಿತ ಕಂಡರೆ ಷೇರುದಾರರು ಸುಮ್ಮನಿದ್ದಾರೆಯೆ? ಷೇರುದಾರ ಜೇಮ್ಸ್ ಕಾಕೊರಿಸ್ ಎಂಬಾತ ಫೆಡರಲ್ ಕೋರ್ಟಿಗೆ ಅರ್ಜಿ ಸಲ್ಲಿಸಿದ್ದಾನೆ. ಕಂಪೆನಿಯ ಸಾಧನೆ ಇಳಿಮುಖವಾಗುತ್ತಿದೆ. ಕಂಪೆನಿಯ ಆದಾಯದ ಬಗ್ಗೆ ಸಿಇಓ ಮತ್ತು ಸಿಎಫ್‌ಓ ಡೇವಿಡ್ ವೆಹ್ನರ್ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಫೇಸ್‌ಬುಕ್‌ನ ಕ್ರಿಯಾಶಾಲಿ ಬಳಕೆದಾರರ ಸಂಖ್ಯೆ ಕಡಿಮೆ ಇದೆ ಎನ್ನುವುದು ಅವನ ಆರೋಪ.

ಈ ಮಧ್ಯೆ 'ಸಿಇಓ ಮತ್ತು ಚೇರ್‌ಮನ್ ಒಬ್ಬನೇ ಆಗಿದ್ದರೆ, ಕಂಪೆನಿಯ ನೀತಿನಿರೂಪಣೆ ಏಕಪಕ್ಷೀಯವಾಗುವ ಸಾಧ್ಯತೆ ಇದೆ. ನಿರ್ಧಾರಗಳ ಮೇಲೆ ಆತನ ಪ್ರಭಾವ ಜಾಸ್ತಿ ಇರುತ್ತದೆ. ಅಧಿಕಾರ ಕಡಿತ ಮಾಡುವುದು ಒಳ್ಳೆಯದು' ಎಂಬ ಸಲಹೆ ಟ್ರಿಲಿಯಂ ಅಸೆಟ್ ಮ್ಯಾನೇಜ್‌ಮೆಂಟ್‌ನಿಂದ ಬಂದಿದೆ.

ಫೇಸ್‌ಬುಕ್‌ನಿಂದ ಸುಳ್ಳುಸುದ್ದಿಗಳು ಹರಡುವುದರ ಬಗ್ಗೆಯೂ ವಿವಿಧ ದೇಶಗಳಲ್ಲಿ ಸಾರ್ವಜನಿಕರಿಂದ ಅಸಮಾಧಾನ ವ್ಯಕ್ತವಾಗಿದೆ. ಈ ಅಸಮಾಧಾನವನ್ನು ತಣಿಸುವ ಬದಲು, ಅದನ್ನು ಸಮರ್ಥಿಸುವಂತೆ ಮಾರ್ಕ್ ಮಾತನಾಡಿದ್ದು ರಾಜಕೀಯ ನೀತಿನಿರೂಪಕರನ್ನು ಮತ್ತು ಉದ್ಯಮವಲಯದ ತಜ್ಞರನ್ನು ಕೆರಳಿಸಿದೆ. ಜನರ ಖಾಸಗಿತನದ ರಕ್ಷಣೆಯ ಬಗ್ಗೆ ಮಾರ್ಕ್‌ಗೆ ಕಾಳಜಿಯಿಲ್ಲ ಎನ್ನುವ ಅಭಿಪ್ರಾಯವೂ ಹರಡಿತು. ಕೆಲವು ಕಂಪೆನಿಗಳ ಏಕಸ್ವಾಮ್ಯದಿಂದ ಜನರ ಖಾಸಗೀತನಕ್ಕೆ ಧಕ್ಕೆ ಬರುತ್ತಿದ್ದು, ಕಂಪೆನಿಗಳ ನಡುವೆ ಸ್ಪರ್ಧೆ ಉಂಟಾಗುವಂತೆ ಕಾಯ್ದೆ ತಿದ್ದುಪಡಿ ಮಾಡಬೇಕು ಎನ್ನುವ ಚರ್ಚೆಯೂ ಅಮೆರಿಕದಲ್ಲಿ ಶುರುವಾಗಿದೆ.

ಸಾಮಾಜಿಕ ತಾಣಗಳಲ್ಲಿ ಈಗಲೇ ಸುಳ್ಳುಸುದ್ದಿಗಳ ಕಾಟ ಅತಿಯಾಗಿದೆ. ಇನ್ನು ಐದು ವರ್ಷ ಹೋದ ಬಳಿಕ ಆಧುನಿಕ ಮೆಷಿನ್ ಕಲಿಕೆ, ಕೃತಕ ಬುದ್ಧಿಮತ್ತೆ, ಹೊಸ ರೀತಿಯ ವೀಡಿಯೊ ಕಂಟೆಂಟ್ ಎಲ್ಲ ಬಂದ ಬಳಿಕ ಸುಳ್ಳು ಸುದ್ದಿ ಯಾವ ಮಟ್ಟಕ್ಕೆ ಮುಟ್ಟಬಹುದು.. ಎನ್ನುವುದು ಪ್ರಾಜ್ಞರ ಆತಂಕ.

ಫೇಸ್‌ಬುಕ್ ಕಂಪೆನಿಯ ಮಟ್ಟಿಗೆ ಅದರ ಸ್ಥಾಪಕ ಜೂಕರ್‌ಬರ್ಗ್ ಸರ್ವಸ್ವ; ಆತನೇ ಸಿಇಓ ಮತ್ತು ಆತನೇ ಚೇರ್‌ಮನ್. ಸಿಇಓ ಆಗಿ ಆತ ಪಡೆಯುವ ಸಂಬಳ ತಿಂಗಳಿಗೆ ಒಂದು ಡಾಲರ್ ಸಂಬಳ ಮಾತ್ರ. ಸಂಬಳದಿಂದ ಆತನಿಗೆ ಏನೂ ಆಗಬೇಕಿಲ್ಲ. ಏಕೆಂದರೆ ಕಂಪೆನಿಯಲ್ಲಿ ಆತನ ಷೇರು ಬಂಡವಾಳ ಅಂದಾಜು 52.1 ಶತಕೋಟಿ ಡಾಲರ್ ಇದೆ. ಷೇರುಬೆಲೆ ಕುಸಿತದಿಂದ ಷೇರುದಾರರಿಗೆ ಮಾತ್ರ ನಷ್ಟ ಆಗಿದ್ದಲ್ಲ. ಜೂಕರ್‌ಬರ್ಗ್‌ಗೂ ಆಗಿದೆ. ಷೇರು ಬೆಲೆ ಕುಸಿತದಿಂದ ಆತನಿಗಾದ ನಷ್ಟ 16.8 ಶತಕೋಟಿ ಡಾಲರ್! ಆತನ ಒಟ್ಟು ಆಸ್ತಿ ಮೊತ್ತಕ್ಕೆ ಹೋಲಿಸಿದರೆ ಇದು ಅತ್ಯಲ್ಪ.

ಹಾರ್ವರ್ಡ್ ವಿವಿ ಯಲ್ಲಿ ಎರಡು ವರ್ಷ ಕಲಿತು ಡ್ರಾಪೌಟ್ ಆದ ಬಳಿಕ ಮಾರ್ಕ್ ಕಟ್ಟಿದ ಫೇಸ್‌ಬುಕ್ ಜಗತ್ತಿನಾದ್ಯಂತ ಹೆಸರು ಮಾಡಿದೆ. ಶ್ರೀಮಂತ ಮನೆತನದ ಒಬ್ಬನೇ ಮಗ. ಅಮ್ಮನ ಮುದ್ದು. ಬುದ್ಧಿವಂತಿಕೆಯಿಂದ ದೊಡ್ಡ ವ್ಯವಹಾರ ಸಾಮ್ರಾಜ್ಯ ಕಟ್ಟಿದಾತ ಮಾರ್ಕ್. ಸದ್ಯಕ್ಕೆ ಕಂಪೆನಿಯ ಶೇಕಡಾ 60ರಷ್ಟು ಮತದಾನ ಹಕ್ಕು ಈತನ ಕೈಯಲ್ಲೇ ಇದೆ. ಅಷ್ಟು ಸುಲಭವಾಗಿ ಚೇರ್‌ಮನ್ ಪಟ್ಟ ಬಿಟ್ಟುಕೊಟ್ಟಾನೆಯೆ? ■



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65